ಓ.ಎಸ್. ನಂಃ 487/2022
ಪಿ.ಡಬ್ಲ್ಯೂ-3 (ದುಂಡೇಶ)

ದಿನಾಂಕ: 12-09-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ.ಎಮ್.ಕೆ.ಡಿ. ವಾದಿ ಪರ ವಕೀಲರಿಂದಃ**

ನನ್ನ ಮುಖ್ಯ ವಿಚಾರಣೆಯ ಬಗ್ಗೆ ಪ್ರಮಾಣ ಪತ್ರ ಸಲ್ಲಿಸಿದ್ದು ಅದರಲ್ಲಿಯ ಸಂಗತಿಗಳು ಸತ್ಯವಾಗಿದ್ದು, ಅದಕ್ಕೆ ನಾನೇ ಸಹಿ ಮಾಡಿದ್ದೇನೆ.

ಈಗ ಸಾಕ್ಷಿದಾರರಿಗೆ ನಿಪಿ-1ನ್ನು ತೋರಿಸಿದ್ದು ಅದರಲ್ಲಿರುವ ಅವರ ತಂದೆಯ ಸಹಿಯನ್ನು ಗುರುತಿಸುತ್ತಾರೆ, ಸದರಿ ಸಹಿಯನ್ನು ಈಗಾಗಲೇ ನಿಪಿ-1ಇ ಎಂದು ಗುರುತಿಸಲಾಗಿದೆ.

**ಪಾಟೀಸವಾಲುಃ ಶ್ರೀ.ಎಮ್.ಬಿ.ಎಚ್. ಪ್ರತಿವಾದಿ 1 ರಿಂದ 5 ರವರ ಪರ ವಕೀಲರಿಂದಃ**

ನಿಪಿ-1ಇ ಎಂದು ಗುರುತಿಸಿರುವ ಸಹಿ ನನ್ನ ತಂದೆಯ ಸಹಿಯನ್ನು ತೋರಿಸಲು ಬೇರೆ ಯಾವುದೇ ದಾಖಲೆಯನ್ನು ನಾನು ಹಾಜರ ಮಾಡಿಲ್ಲ. ನಿಪಿ-1ನ್ನು ಬರೆಯುವಾಗ ನಾನು ಹಾಜರ ಇರಲಿಲ್ಲ ಮತ್ತು ಅದರ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ. ನಿಪಿ-1ನ್ನು ನಮ್ಮ ತಂದೆ ಬರೆದಿದ್ದು ಹಾಗೂ ನನಗೆ ನಿಪಿ-1 ರ ಬಗ್ಗೆ ವೈಯಕ್ತಿ ಮಾಹಿತಿ ಇರದೇ ಇದ್ದರೂ ಸಹ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಓ.ಎಸ್. ನಂಃ 487/2022
ಪಿ.ಡಬ್ಲ್ಯೂ-3 (ದುಂಡೇಶ)

**<u>ಮರುವಿಚಾರಣೆಃ</u>** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ.

(ಉಮೇಶ ಎಸ್. ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ